ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 4, January- February 2025, Pp. 47-56**
**©*IIMRD*, Mysuru**

IIMRD JOURNALS

**www.iimrd.com**

# ಬುಡಕಟ್ಟು ಸಮುದಾಯಗಳಿಗಾದ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸುವಲ್ಲಿ ಅರಣ್ಯ ಹಕ್ಕು ಕಾಯಿದೆ 2006ರ ಪಾತ್ರ

**ಡಾ. ಕುಮಾರಸ್ವಾಮಿ ಎ.ಎನ್**
ಭಾರತೀಯ ಬಹುಶಿಸ್ತೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ, ಮೈಸೂರು

**ಸಾರಾಂಶ: (Abstract)**

*ಭಾರತವು ವಿವಿಧ ಜಾತಿ, ಬುಡಕಟ್ಟು ಜನಾಂಗ, ಧರ್ಮ, ಸಮಾಜ, ಸಂಸ್ಕೃತಿ ಮತ್ತು ಆರ್ಥಿಕ ಪದ್ಧತಿಯನ್ನು ಒಳಗೊಂಡಿರುವ ರಾಷ್ಟ್ರವಾಗಿದೆ. ಭಾರತದಲ್ಲಿ 705 ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಸಮುದಾಯಕ್ಕೆ ಸೇರಿಸಲಾಗಿದೆ. ಇವರು ತಮ್ಮದೇ ಆದ ಆಚಾರ–ವಿಚಾರ, ಉಡುಗೆ–ತೊಡುಗೆ, ಆಹಾರ ಪದ್ಧತಿ ಮತ್ತು ನಂಬಿಕೆಗಳೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಬುಡಕಟ್ಟು ಅಭಿವೃದ್ಧಿಯ ಹೆಸರಿನಲ್ಲಿ ಅನುಷ್ಠಾನಗೊಳಿಸಿದ ಹಲವಾರು ಯೋಜನೆಗಳು ಬುಡಕಟ್ಟು ಜನರ ಜೀವನಕ್ಕೆ ಮಾರಕವಾಗಿ ಪರಿಣಮಿಸಿದವು. ಅವುಗಳಲ್ಲಿ ಪ್ರಮುಖವಾದದ್ದು 1972ರ ವನ್ಯಜೀವಿ ಕಾಯ್ದೆ ಮತ್ತು ಅಣೆಕಟ್ಟುಗಳ ನಿರ್ಮಾಣ, ಹುಲಿಯೋಜನೆ, ವನ್ಯಜೀವಿಧಾಮ ಘೋಷಣೆ, ಅರಣ್ಯ ಸಂರಕ್ಷಣೆ ಕಾಯ್ದೆ, ರಾಷ್ಟ್ರೀಯ ಉದ್ಯಾನವನಗಳ ನಿರ್ಮಾಣ ಇತ್ಯಾದಿ. ಈ ಕಾಯ್ದೆಗಳು ಅನುಷ್ಠಾನಕ್ಕೆ ಬಂದ ನಂತರ ಅರಣ್ಯದೊಳಗೆ ವಾಸಿಸುತ್ತಿದ್ದ ಬುಡಕಟ್ಟು ಮತ್ತು ಇತರೆ ಅರಣ್ಯವಾಸಿ ಜನರು ಹಲವಾರು ಹಕ್ಕುಗಳನ್ನು ಪಡೆಯುವಲ್ಲಿ ಅವಕಾಶ ವಂಚಿತರಾದರು. ಶತಮಾನಗಳಿಂದ ಸಮಸ್ಯೆಗಳ ನಡುವೆಯೇ ಜೀವನ ಸಾಗಿಸುವಂತಾಯಿತು. ಈ ಹಿನ್ನಲೆಯಲ್ಲಿ ಅವರಿಗಾದ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸುವುದಕ್ಕಾಗಿ ಕೇಂದ್ರ ಸರ್ಕಾರವು 2008ರಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ, 2006 ರನ್ನು ಜಾರಿಗೊಳಿಸಿತು. ಪ್ರಸ್ತುತ ಲೇಖನದಲ್ಲಿ ಈ ಕಾಯಿದೆ ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಬುಡಕಟ್ಟು ಸಮುದಾಯ, ಅರಣ್ಯ ಹಕ್ಕು ಕಾಯಿದೆ 2006, ಎಫ್‌ಆರ್‌ಎ–2006, ವೈಯಕ್ತಿಕ ಹಕ್ಕು, ಸಾಮುದಾಯಿಕ ಹಕ್ಕು.

## ಪೀಠಿಕೆ

ಪರಿಶಿಷ್ಟ ಪಂಗಡಗಳು ಮತ್ತು ಇತರ ಸಾಂಪ್ರದಾಯಿಕ ಅರಣ್ಯ ನಿವಾಸಿಗಳು (ಅರಣ್ಯ ಹಕ್ಕುಗಳ ಗುರುತಿಸುವಿಕೆ) ಕಾಯಿದೆ, 2006 ಅಥವಾ ಸಂಕ್ಷಿಪ್ತವಾಗಿ, ಅರಣ್ಯ ಹಕ್ಕುಗಳ ಕಾಯಿದೆ (ಎಫ್‌ಆರ್‌ಎ),

*Please cite this article as:* ಕುಮಾರಸ್ವಾಮಿ ಎ.ಎನ್. (2025). ಬುಡಕಟ್ಟು ಸಮುದಾಯಗಳಿಗಾದ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸುವಲ್ಲಿ ಅರಣ್ಯ ಹಕ್ಕು ಕಾಯಿದೆ 2006ರ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(4). ಪು.ಸಂ.* 47–56

2006, ಬುಡಕಟ್ಟು ಮತ್ತು ಇತರೆ ಅರಣ್ಯವಾಸಿಗಳು ಅರಣ್ಯ ಭೂಮಿಯ ಮೇಲಿನ ಸಾಂಪ್ರದಾಯಿಕ ಹಕ್ಕುಗಳನ್ನು ಪಡೆಯಲು ಅನುಕೂಲವಾಗುವಂತೆ ಭಾರತದಲ್ಲಿ ಇದುವರೆಗೆ ಜಾರಿಗೊಳಿಸಲಾದ ಅತ್ಯಂತ ಪ್ರಮುಖ ಮತ್ತು ಜನಪ್ರಿಯ ಹಕ್ಕು ಆಧಾರಿತ ಕಾನೂನುಗಳಲ್ಲಿ ಒಂದಾಗಿದೆ.

ಈ ಕಾಯಿದೆಯನ್ನು ಅನುಷ್ಠಾನಗೊಳಿಸುವ ನಿಯಮಗಳನ್ನು 2008 ರಲ್ಲಿ ರೂಪಿಸಲಾಯಿತು ಮತ್ತು 2012 ರಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲಾಯಿತು. FRA ಯಲ್ಲಿ ಒಳಗೊಂಡಿರುವ ಸಕ್ರಿಯಗೊಳಿಸುವ ನಿಬಂಧನೆಗಳು ಅರಣ್ಯ ನಿವಾಸಿಗಳಿಗೆ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸಲು ಪ್ರಯತ್ನಿಸುತ್ತವೆ, ಎಫ್‌ಆರ್‌ಎಗೆ ಮುಂಚಿನ ಕಾಯಿದೆಗಳಲ್ಲಿ ಅರಣ್ಯ ಭೂಮಿ ಮತ್ತು ಸಂಪನ್ಮೂಲಗಳ ಹಕ್ಕುಗಳಿಗೆ ಸಂಬಂಧಿಸಿದಂತೆ ಬುಡಕಟ್ಟು ಸಮುದಾಯಗಳ ಹಕ್ಕುಗಳನ್ನು ಕಾನೂನುಬದ್ಧವಾಗಿ ಗುರುತಿಸಲಾಗಿಲ್ಲ ಮತ್ತು ದಾಖಲಿಸಲಾಗಿಲ್ಲ ಅಲ್ಲದೆ  ಬುಡಕಟ್ಟು ಜನರ ಸಾಂಪ್ರದಾಯಿಕ ಹಕ್ಕುಗಳನ್ನು ನಿರಾಕರಿಸಲಾಗಿದೆ. ಈ ಹಿನ್ನಲೆಯಲ್ಲಿ ಅರಣ್ಯ ಹಕ್ಕು ಕಾಯಿದೆಯ ಉದಾತ್ತ ಉದ್ದೇಶಗಳ ಹೊರತಾಗಿಯೂ, ಅರಣ್ಯವಾಸಿಗಳು ಅರಣ್ಯದಲ್ಲಿ ವಾಸಿಸುವ ಮತ್ತು ಅರಣ್ಯ ಸಂಪನ್ಮೂಲಗಳನ್ನು ಬಳಸುವ ಹಕ್ಕುಗಳನ್ನು ಗುರುತಿಸುವುದದರ ಜೊತೆಗೆ ಅರಣ್ಯವಾಸಿ ಸಮುದಾಯಗಳಿಗೆ ಅರಣ್ಯ ಸಂಪನ್ಮೂಲಗಳನ್ನು ಸುಸ್ಥಿರವಾಗಿ ರಕ್ಷಿಸಲು, ಪುನರುತ್ಪಾದಿಸಲು, ಸಂರಕ್ಷಿಸಲು ಮತ್ತು ನಿರ್ವಹಿಸಲು ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

**ಅರಣ್ಯ ಹಕ್ಕು ಕಾಯ್ದೆ–2006**

ಅರಣ್ಯ ಹಕ್ಕು ಕಾಯಿದೆ ಎನ್ನುವಂತಹುದನ್ನು ತಲತಲಾಂತರಗಳಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಅಂದರೆ ಅವರ ಹಕ್ಕುಗಳನ್ನು ದಾಖಲಿಸಿರದ ಅರಣ್ಯವಾಸಿ ಅನುಸೂಚಿ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳ ಮತ್ತು ಅಧಿಭೋಗವನ್ನು ಮಾನ್ಯ ಮಾಡಲು ಮತ್ತು ನಿಹಿತಗೊಳಿಸಲು ಹಾಗೂ ಹಾಗೆ ನಿಹಿತಗೊಳಿಸಿದಾಗ ಅರಣ್ಯ ಹಕ್ಕುಗಳನ್ನು ಮತ್ತು ಅರಣ್ಯ ಜಮೀನಿಗೆ ಸಂಬಂಧಿಸಿದಂತಹ ಮಾನ್ಯತೆಗೆ ಹಾಗೂ ನಿಹಿತಗೊಳಿಸಿದ ಅಗತ್ಯವಾದ ಸಾಕ್ಷ್ಯದ ಸ್ವರೂಪವನ್ನು ದಾಖಲಾಗಿಸುವುದಕ್ಕಾಗಿ ನಿರ್ಧಿಷ್ಟ ರೂಪರೇಷೆಗೆ ಅವಕಾಶ ಕಲ್ಪಿಸುವ ಅಧಿನಿಯಮ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ.

ಸಾವಿರಾರು ವರ್ಷಗಳಿಂದ ಕಾಡಿನಲ್ಲಿಯೇ ನೆಲೆಸಿ ಕಾಡಿನ ಸಂಪನ್ಮೂಲವನ್ನು ನಂಬಿ, ಸಾಂಪ್ರದಾಯಿಕ ಜ್ಞಾನದ ಮೂಲಕ ಜೀವನ ಸಾಗಿಸುತ್ತಿದ್ದ ಬುಡಕಟ್ಟು ಸಮುದಾಯಗಳಿಗೆ ಸೇರಿದ ಲಕ್ಷಾಂತರ ಕುಟುಂಬಗಳ ಜೀವನಕ್ಕೆ ಆಧಾರವಾಗಿದ್ದ ಕಾಡು ಮತ್ತು ಸಾಂಪ್ರದಾಯಿಕ ಹಕ್ಕುಗಳನ್ನು ಸರ್ಕಾರವು ಕಾಡನ್ನು ಸಂರಕ್ಷಿಸುವ ಉದ್ದೇಶಗಳಲ್ಲಿ ಜಾರಿಗೆ ತಂದ ಕಾಯಿದೆ ಮತ್ತು ಕಾನೂನುಗಳ ಮೂಲಕ ಕಿತ್ತುಗೊಳ್ಳಲಾಯಿತು. ಈ ಕ್ರಮಗಳಿಂದಾಗಿ ಕಾಡನ್ನೇ ಜೀವನಾಧಾರವೆಂದು ನಂಬಿದ್ದ ಬುಡಕಟ್ಟು ಸಮುದಾಯಗಳಿಗೆ ಅನ್ಯಾಯವನ್ನು ಮಾಡಿದಂತಾಯಿತು. ಇದನ್ನು ಹಲವಾರು ಸಮೀಕ್ಷೆಗಳ ಮೂಲಕ ಕಾಡು ಮತ್ತು ಅದರ ಸಂಪನ್ಮೂಲಗಳು ನಶಿಸದಂತೆ ಬೆಳೆಸಿ ಉಳಿಸಿಕೊಂಡು ಹೋಗುವಲ್ಲಿ ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ಪದ್ಧತಿ ಮತ್ತು ಅದರ ಭಾಗವಹಿಸುವಿಕೆ ಅತಿಮುಖ್ಯವೆಂದು ಮನಗಂಡು, ಸರ್ಕಾರವು

ಕೆಲವು ಕಾಯಿದೆ ಮತ್ತು ಕಾನೂನುಗಳನ್ನು ಜಾರಿಗೆ ತರಲಾಯಿತು. ಅದರಲ್ಲಿ ಇತ್ತೀಚಿಗೆ ಜಾರಿಗೆ ಬಂದಿರುವ ಪರಿಶಿಷ್ಟ ಬುಡಕಟ್ಟಿನ ಸಮುದಾಯ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಕಾಯ್ದೆ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಪರಿಣಾಮ ಬೀರಬಹುದಾಗಿದೆ.

ಅರಣ್ಯ ಸಂಪತ್ತನ್ನು ಬಳಸಿ ಮತ್ತು ಉಳಿಸಿಕೊಂಡು ಹೋಗುವ ಜವಾಬ್ದಾರಿ ಕೇವಲ ಸರ್ಕಾರ ಅಥವ ಅರಣ್ಯ ಇಲಾಖೆಗೆ ಮಾತ್ರ ಸೀಮಿತವಲ್ಲ. ಬದಲಿಗೆ ಕಾಡಿನ ಸಂಪತ್ತಿನ ಮೇಲೆ ಅವಲಂಬಿತರಾಗಿರುವ ಅರಣ್ಯ ಅವಲಂಬಿತ ಜನರ ಪೂರ್ಣ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮತ್ತು ಅರಣ್ಯ ಇಲಾಖೆಗಳು ಮುಖ್ಯ ಜವಾಬ್ದಾರಿ ಹೊಂದಿದ್ದು, ಆಗಾಗ್ಗೆ ಕಾಯಿದೆ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಸಾಮಾನ್ಯ ಜನರಲ್ಲಿ ಮತ್ತು ಅರಣ್ಯವಾಸಿಗಳಲ್ಲಿ ಅರಣ್ಯ ಸಂಪತ್ತನು ಉಪಯೋಗಿಸುವ ಮತ್ತು ಉಳಿಸಿಕೊಂಡು ಹೋಗುವ ಹಕ್ಕುಗಳನ್ನು ಹಂತ ಹಂತವಾಗಿ ಕೊಡಲಾಗುತ್ತಿದೆ. ಈ ನಿಟ್ಟಿನಲ್ಲಿ ಜನವರಿ 1, 2008 ರಂದು ಪರಿಶಿಷ್ಟ ಬುಡಕಟ್ಟು ಸಚಿವಾಲಯವು ಅರಣ್ಯ ಸಂಪನ್ಮೂಲಗಳ ಮೇಲಿನ ಹಕ್ಕುಗಳನ್ನು ತಲತಲಾಂತರಗಳಿಂದ ಅನುಭವಿಸಿಕೊಂಡು ಬಂದಿರುವ, ಅವಲಂಬಿತ ಸಮುದಾಯಕ್ಕೆ ಕೊಡುವ ಉದ್ದೇಶದಿಂದ ಜಾರಿಗೊಳಿಸಲಾಗಿದೆ.

ಈ ಕಾಯ್ದೆಯನ್ನು ಸೂಕ್ತ ಫಲಾನುಭವಿಗಳಿಗೆ ತಲುಪಿಸಲು ಮತ್ತು ಸರಿಯಾಗಿ ಜಾರಿಗೆ ತರಲು ಸ್ಥಳೀಯ ಸಂಸ್ಥೆಗಳಿಗೆ (ಗ್ರಾಮ ಪಂಚಾಯಿತಿ, ಗ್ರಾಮಸಭೆ) ಜವಾಬ್ದಾರಿಯನ್ನು ಮತ್ತು ಹೆಚ್ಚಿನ ಅಧಿಕಾರವನ್ನು ಕೊಡಲಾಗಿದೆ. ಈ ಕಾಯಿದೆಯನ್ನು ಅನುಷ್ಠಾನಗೊಳಿಸಲು ಗ್ರಾಮ, ವಿಭಾಗ, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಸಮಿತಿಗಳು ಇರುತ್ತವೆ.

**ಅರಣ್ಯ ಭೂಮಿಯ ಹಕ್ಕು:**

ಪರಿಶಿಷ್ಟ ಬುಡಕಟ್ಟಿನ ಸಮುದಾಯ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳಿಗೆ ಜೀವನ ನಿರ್ವಹಣೆಗಾಗಿ, ಯಾರು ಡಿಸೆಂಬರ್ 13., 2005 ಕ್ಕಿಂತ ಮೊದಲು ಸ್ವತಃ ಬಳಕೆಗಾಗಿ ಎಷ್ಟು ಹೆಕ್ಟೇರ್ ಅಥವಾ ಎಕರೆ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೋ, ಅಷ್ಟು ಭೂಮಿಯನ್ನು ಹೊಂದುವ ಹಕ್ಕು, ಅಂದರೆ ಒಬ್ಬ ವ್ಯಕ್ತಿ ಅರ್ಧ ಹೆಕ್ಟೇರ್ ಸಾಗುವಳಿ ಮಾಡುತ್ತಿದ್ದರೆ ಆ ವ್ಯಕ್ತಿಗೆ ಒಂದು ಹೆಕ್ಟೇರ್ ಅಥವಾ ಒಬ್ಬ ವ್ಯಕ್ತಿ ಐದು ಹೆಕ್ಟೇರ್ ಸಾಗುವಳಿ ಮಾಡುತ್ತಿದ್ದರೆ ಆ ವ್ಯಕ್ತಿಗೆ ನಾಲ್ಕು ಹೆಕ್ಟೇರ್ (10 ಎಕರೆ ಮಾತ್ರ) ಮಾತ್ರ ಸಾಗುವಳಿ ಪಟ್ಟಾ (ಹಕ್ಕುಪತ್ರ) ನೀಡುವ ಅವಕಾಶವಿರುತ್ತದೆ. ಹಾಗೂ ಈ ಭೂಮಿಯನ್ನು ಯಾವುದೇ ಕಾರಣಕ್ಕೂ ಬೇರೆಯವರಿಗೆ ಮಾರಾಟ ಮಾಡುವಂತಿಲ್ಲ ಮತ್ತು ವಂಶಪಾರಂಪರ್ಯವಾಗಿ ಮಾತ್ರ ಈ ಭೂಮಿಯ ಹಕ್ಕು ಬರುತ್ತದೆ.

**ವಿವಾಧಿತ ಮತ್ತು ಗುತ್ತಿಗೆ ಅರಣ್ಯ ಭೂಮಿಯ ಮೇಲಿನ ಹಕ್ಕು**

ಡಿಸೆಂಬರ್ 13, 2005 ಕ್ಕಿಂತ ಮೊದಲು ಗರಿಷ್ಠ ನಾಲ್ಕು ಹೆಕ್ಟೇರ್ (10 ಎಕರೆ) ವರೆಗೆ ಯಾವುದೇ ಹೆಸರಿನಲ್ಲಿ ವಿವಾದದಲ್ಲಿರುವ ಭೂಮಿ ಅಥವ ಸರ್ಕಾರವು ಅರಣ್ಯ ಜಮೀನುಗಳ ಸಂಬಂಧದಲ್ಲಿ ನೀಡಿರುವ ಗುತ್ತಿಗೆಗಳು ಅಥವಾ ಮಂಜೂರಾತಿಗಳನ್ನು ಹಕ್ಕುಗಳನ್ನಾಗಿ ಪರಿವರ್ತಿಸಿಕೊಳ್ಳಲು ಅವಕಾಶವಿದೆ.

**ಪುನರ್‌ವಸತಿಯ ಹಕ್ಕು**

ಡಿಸೆಂಬರ್ 13, 2005 ಕ್ಕಿಂತ ಮೊದಲು ಪರಿಶಿಷ್ಟ ಬುಡಕಟ್ಟು ಸಮುದಾಯ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳಿಗೆ ಅವರ ಪುನರ್‌ವಸತಿ ಕಾನೂನು ಹಕ್ಕುಗಳನ್ನು ಜಾರಿ ಮಾಡಿದೆ. ಯಾವುದೇ ವಿಧದ ಅರಣ್ಯ ಭೂಮಿಯಿಂದ ಕಾನೂನು ಬಾಹಿರವಾಗಿ ಹೊರ ಹಾಕಿರುವ ಅಥವಾ ಸ್ಥಳಾಂತರಿಸಿರುವ ಪ್ರಕರಣಗಳಲ್ಲಿ ಪರ್ಯಾಯ ಜಮೀನೂ ಅಥವಾ ಅಲ್ಲಿಯೇ ಪುನರ್‌ವಸತಿಗೆ ಅವಕಾಶ ನೀಡಲಾಗಿದೆ.

**ಸಮುದಾಯ ಅರಣ್ಯ ಹಕ್ಕುಗಳ ಒಡೆತನ ಮತ್ತು ಬಳಸುವ ಹಕ್ಕುಗಳು**

ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳು ಗ್ರಾಮದ ಒಳಗೆ ಮತ್ತು ಹೊರಗೆ ಸಾಂಪ್ರದಾಯಿಕವಾಗಿ ಸಂಗ್ರಹಿಸಲಾಗುತ್ತಿರುವ ಸಣ್ಣ ಕಿರುಉತ್ಪನ್ನಗಳನ್ನು ಸಂಗ್ರಹಿಸುವ, ಉಪಯೋಗಿಸುವ ಅಥವಾ ವಿಲೇವಾಡಿ (ಮಾರಾಟ)ಮಾಡುವ ಹಕ್ಕು ಇವುಗಳನ್ನು ಎತ್ತಿನಗಾಡಿ, ಸೈಕಲ್ ಮತ್ತು ಒರೆಗಳ ಮೂಲಕ ಹೊತ್ತು ಮಾರಾಟ ಮಾಡುವ ಮಾಲೀಕತ್ವ ಹಕ್ಕನ್ನು ಹೊಂದಬಹುದಾಗಿದೆ. ಸಮುದಾಯ ಅರಣ್ಯ, ಹುಲ್ಲುಗಾವಲು, ನೆಡುತೋಪು, ಸ್ಮಶಾನಗಳ ಒಡೆತನದ ಹಕ್ಕು ಮತ್ತು ಸಂರಕ್ಷಿಸುವ ಜವಾಬ್ದಾರಿಯನ್ನು ಸಮುದಾಯದವರಿಗಿರುತ್ತದೆ.

ಪ್ರಾಚೀನ ಬುಡಕಟ್ಟು ಸಮೂಹಗಳಿಗೆ ಮತ್ತು ಕೃಷಿಪೂರ್ವ ಸಮುದಾಯಗಳಿಗೆ ವಸತಿ ಮತ್ತು ವಾಸಸ್ಥಳದ ಹಕ್ಕುಗಳನ್ನು ಪಡೆಯಬಹುದಾಗಿದ್ದು, ಕೋರಿಕೆಗಳು ವಿವಾದಕ್ಕೆ ಒಳಪಟ್ಟಿರುವ ಯಾವುದೇ ರಾಜ್ಯದಲ್ಲಿ ಯಾವುದೇ ಹೆಸರಿನಡಿಯಲ್ಲಿ ವಿವಾದಿತ ಜಮೀನಿನಲ್ಲಿಯ ಅಥವಾ ಅದರ ಮೇಲಿನ ಹಕ್ಕುಗಳನ್ನೂ ಕೂಡ ಹೊಂದಬಹುದಾಗಿರುತ್ತದೆ. ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅರಣ್ಯ ಜಮೀನುಗಳ ಮೇಲಿನ ಹಕ್ಕುಗಳ ಸಂಬಂಧದಲ್ಲಿ ನೀಡಿರುವ ಪಟ್ಟಾಗಳು ಅಥವಾ ಗುತ್ತಿಗೆ ಅಥವಾ ಮಂಜೂರಾತಿಗಳ ಪರಿವರ್ತನೆ ಮಾಡಿಕೊಳ್ಳಬಹುದಾಗಿದ್ದು, ಅರಣ್ಯಗಳಲ್ಲಿನ ಎಲ್ಲಾ ಅರಣ್ಯ ಗ್ರಾಮಗಳ ಹಳೆಯ ನೆಲಸು ಪ್ರದೇಶಗಳು, ಮೋಜಿಣಿ ಮಾಡದ ಗ್ರಾಮಗಳು ಮತ್ತು ಇತರೆ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಹಕ್ಕನ್ನು ಕೂಡ ಕಲ್ಪಿಸಲಾಗಿದೆ.

ಜಲನಿಕಾಯಗಳಲ್ಲಿರುವ ಮೀನು ಮತ್ತು ಇತರ ಉತ್ಪನ್ನಗಳನ್ನು ಬಳಸುವ ಅಥವಾ ಅವುಗಳನ್ನು ಹೊಂದುವ, ಮೇಯಿಸುವ ನೆಲೆಸಿಗರ ಅಥವಾ ವಲಸಿಗರ ಮತ್ತು ಅಲೆಮಾರಿ ಅಥವಾ ದನಗಾಹಿ ಸಮುದಾಯಗಳಿಗೆ ಇರುವ ಪಾರಂಪರಿಕ ಋತುಕಾಲಿಕ ಸಂಪನ್ಮೂಲಗಳನ್ನು ಹೊಂದುವ ಸಮುದಾಯದ ಇತರ ಹಕ್ಕುಗಳನ್ನು ಪಡೆಯಬಹುದಾಗಿರುತ್ತದೆ.

**ಸಮುದಾಯದ ಅರಣ್ಯ ಸಂಪನ್ಮೂಲಗಳನ್ನು ನಿರ್ವಹಣೆ ಮಾಡುವ ಮತ್ತು ರಕ್ಷಿಸುವ ಹಕ್ಕುಗಳು**

ಸುಸ್ಥಿರ ಬಳಕೆಗಾಗಿ ಸಮುದಾಯವು ಪಾರಂಪರಿಕವಾಗಿ ರಕ್ಷಿಸುತ್ತಿರುವ ಮತ್ತು ಸಂರಕ್ಷಿಸುತ್ತಿರುವ ಯಾವುದೇ ಸಮುದಾಯದ ಅರಣ್ಯ ಸಂಪನ್ಮೂಲವನ್ನು ರಕ್ಷಿಸುವ, ಪುನರುತ್ಪಾದಿಸುವ ಅಥವಾ ಸಂರಕ್ಷಿಸುವ ಅಥವಾ ನಿರ್ವಹಣೆ ಮಾಡುವ ಹಕ್ಕನ್ನು ಅರಣ್ಯವಾಸಿ ಸಮುದಾಯಗಳು ಹೊಂದಬಹುದಾಗಿರುತ್ತದೆ.

ಯಾವುದೇ ರಾಜ್ಯ ಕಾನೂನಿನ ಅಥವಾ ಯಾವುದೇ ಸ್ವಾಯತ್ತ ಜಿಲ್ಲಾ ಪರಿಷತ್ತಿನ ಅಥವಾ ಸ್ವಾಯತ್ತ ಪ್ರಾದೇಶಿಕ ಪರಿಷತ್ತಿನ ಕಾನೂನುಗಳ ಅಡಿಯಲ್ಲಿ ಮಾನ್ಯ ಮಾಡಿದ ಹಕ್ಕುಗಳು ಅಥವಾ ಯಾವುದೇ ರಾಜ್ಯದ ಸಂಬಂಧಪಟ್ಟ ಬುಡಕಟ್ಟುಗಳ ಯಾವುದೇ ಪಾರಂಪರಿಕ ಅಥವಾ ರೂಢಿಗತ ಕಾನೂನಿನ ಅಡಿಯಲ್ಲಿ ಬುಡಕಟ್ಟು ಜನಾಂಗದ ಹಕ್ಕುಗಳೆಂದು ಅಂಗೀಕೃತವಾಗಿರುವ ಹಕ್ಕುಗಳ ಜೊತೆಗೆ ಜೈವಿಕ ವೈವಿಧ್ಯತೆ ಹಕ್ಕು ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಮತ್ತು ಪಾರಂಪರಿಕ ಜ್ಞಾನಕ್ಕೆ ಇರುವ ಸಮುದಾಯದ ಹಕ್ಕು, ಯಾವುದೇ ಜಾತಿಯ ವನ್ಯಪ್ರಾಣಿಯನ್ನು ಬೇಟೆಯಾಡುವ ಅಥವಾ ಉಪಾಯದಿಂದ ಹಿಡಿಯುವ ಅಥವಾ ಅದರ ಶರೀರದ ಭಾಗವನ್ನು ತೆಗೆದುಕೊಳ್ಳುವ ಪಾರಂಪರಿಕ ಹಕ್ಕನ್ನು ಹೊರತುಪಡಿಸಿ, ಸಂದರ್ಭಾನುಸಾರ, ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳು ಅಥವಾ ಇತರ ಪಾರಂಪರಿಕ ಅರಣ್ಯವಾಸಿಗಳು ರೂಢಿಗತವಾಗಿ ಅನುಭವಿಸುತ್ತಿರುವ ಯಾವುದೇ ಇತರ ಪಾರಂಪರಿಕ ಹಕ್ಕುಗಳನ್ನು ಹೊಂದಬಹುದಾಗಿದೆ. ಮೂಲಸ್ಥಾನದಲ್ಲೇ ಪುನರ್ ವಸತಿ ಹಕ್ಕನ್ನೂ ಕೂಡ ಪಡೆಯಬಹುದಾಗಿದ್ದು, ಸರ್ಕಾರವು ನಿರ್ವಹಿಸುವ ಗ್ರಾಮಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ಶಾಲೆಗಳು, ಔಷಧಾಲಯ ಅಥವಾ ಆಸ್ಪತ್ರೆಗಳು, ಅಂಗನವಾಡಿಗಳು, ನ್ಯಾಯಬೆಲೆ ಅಂಗಡಿಗಳು, ವಿದ್ಯುತ್ ಹಾಗೂ ದೂರವಾಣಿ ಸಂಪರ್ಕಗಳು, ಕೆರೆಗಳು ಮತ್ತು ಇತರ ಸಣ್ಣ ಜಲನಿಕಾಯಗಳು, ಕುಡಿಯುವ ನೀರು ಸರಬರಾಜು ಮತ್ತು ನೀರಿನ ಕೊಳವೆ ಮಾರ್ಗಗಳು, ನೀರು ಅಥವಾ ಮಳೆ ನೀರು ಕೊಯ್ಲು ನಿರ್ಮಿತಿಗಳು, ಸಣ್ಣ ನೀರಾವರಿ ಕಾಲುವೆಗಳು, ಸಾಂಪ್ರದಾಯಿಕವಲ್ಲದ ಇಂಧನ ಮೂಲ; ಕೌಶಲ್ಯ ವರ್ಧನೆ ಅಥವಾ ವೃತ್ತಿ ತರಬೇತಿ ಕೇಂದ್ರಗಳು, ರಸ್ತೆಗಳು ಮತ್ತು ಸಮುದಾಯ ಕೇಂದ್ರಗಳನ್ನು ಗ್ರಾಮ/ಹಾಡಿಗಳಲ್ಲಿ ನಿರ್ಮಿಸಲು ಪ್ರತಿ ಹೆಕ್ಟೇರ್‌ಗೆ ಎಪ್ಪತ್ತೈದು ಮರಗಳನ್ನು ಮೀರದಂತೆ ಕಡಿಯುವುದಕ್ಕೆ ಅವಕಾಶವಿರುತ್ತದೆ. ರಾಷ್ಟ್ರೀಯ ಉದ್ಯಾನವನಗಳಲ್ಲಿ ಮತ್ತು ಅಭಯಾರಣ್ಯಗಳಲ್ಲಿ ಅಪಾಯದಲ್ಲಿರುವ ವನ್ಯ ಜೀವಿಗಳ ತಾಣಗಳಲ್ಲಿ ಈ ಅಧಿನಿಯಮದ ಮೇರೆಗೆ ಮಾನ್ಯ ಮಾಡಿದ ಅರಣ್ಯ ಹಕ್ಕುಗಳನ್ನು ತರುವಾಯ ಮಾರ್ಪಾಟುಗೊಳಿಸಬಹುದು ಅಥವಾ ಪುನರ್ ಇತ್ಯರ್ಥಗೊಳಿಸಬಹುದಾಗಿರುತ್ತದೆ.

**ಭಾರತದಲ್ಲಿ ಅರಣ್ಯ ಹಕ್ಕು ಕಾಯಿದೆ ಅನುಷ್ಠಾನದ ವಿವರ**


ಭಾರತದಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದಲ್ಲಿ ಇತರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕಕ್ಕಿಂತ ಒಡಿಶಾ ರಾಜ್ಯವು ಗಣನೀಯ ಪ್ರಗತಿ ಸಾಧಿಸಿದೆ. ಆದಾಗ್ಯೂ ಅರಣ್ಯ ಅವಲಂಬಿತ ಪರಿಶಿಷ್ಟ ಪಂಗಡಗಳು ಮತ್ತು ಇತರ ಸಾಂಪ್ರದಾಯಿಕ ಅರಣ್ಯವಾಸಿಗಳ ಕೆಲವು ಅಂದಾಜುಗಳಿಗೆ ಹೋಲಿಸಿದಾಗ ಅನುಷ್ಠಾನದ ಪ್ರಸ್ತುತ ಸ್ಥಿತಿಯು ಕಾಯಿದೆಯ ಸಂಪೂರ್ಣ ಸಾಮರ್ಥ್ಯವನ್ನು ಇನ್ನೂ ಅರಿತುಕೊಳ್ಳಬೇಕಾಗಿದೆ.

**ಕೋಷ್ಟಕ 1: ಭಾರತದಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ (31–1–2022 ರಲ್ಲಿದ್ದಂತೆ)**

| ವಿವರ | ಅರಣ್ಯ ಹಕ್ಕು ಪಡೆಯಲು ಅರ್ಜಿ ಸ್ವೀಕಾರ | ವಿತರಣೆಯಾಗಿರುವ ಹಕ್ಕುಗಳ ಪ್ರಮಾಣ | ವಿತರಿಸಲಾಗಿರುವ ಭೂಮಿ ಪ್ರಮಾಣ (ಎಕರೆಗಳಲ್ಲಿ) |
|---|---|---|---|
| ವೈಯಕ್ತಿಕ ಅರಣ್ಯ ಹಕ್ಕು | 42,60,115 | 21,31,771 | 45,46,800 |
| ಸಾಮುದಾಯಿಕ ಅರಣ್ಯ ಹಕ್ಕು | 1,68,818 | 1,01,978 | 1,13,56,527 |
| ಒಟ್ಟು | 44,28,933 | 22,33,749 | 1,59,03,327,7 |

**ಮೂಲ:** ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ನವದೆಹಲಿ–2022

**ಗ್ರಾಫ್ 1: ಭಾರತದಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ (31–1–2022 ರಲ್ಲಿದ್ದಂತೆ)**




ಹಕ್ಕುಗಳ ಸ್ಥಿತಿ ಮತ್ತು ಗುರುತಿಸುವಿಕೆಗೆ ಸಂಬಂಧಿಸಿದಂತೆ ರಾಜ್ಯಗಳಾದ್ಯಂತ ಹೆಚ್ಚಿನ ವ್ಯತ್ಯಾಸವಿದೆ ಮತ್ತು ಪ್ರಗತಿಯು ಕೆಲವು ಪ್ರದೇಶಗಳಿಗೆ ಸೀಮಿತವಾಗಿದೆ. ಹಕ್ಕುಗಳ ನಡುವೆ ವೈಯಕ್ತಿಕ ಹಕ್ಕುಗಳನ್ನು ಮಾತ್ರ ಪರಿಹರಿಸಲಾಗಿದೆ. ಆದರೆ ಸಮುದಾಯ ಅರಣ್ಯ ಹಕ್ಕುಗಳು ಮತ್ತು ಸಮುದಾಯ ಅರಣ್ಯ ಸಂಪನ್ಮೂಲ ಹಕ್ಕುಗಳ ಮಾನ್ಯತೆ ಕೆಲವೇ ರಾಜ್ಯಗಳಿಗೆ ಸೀಮಿತವಾಗಿದೆ. ಕೋಷ್ಟಕ 5.1ರಲ್ಲಿ ವೈಯಕ್ತಿಕ ಅರಣ್ಯ ಹಕ್ಕು ಮತ್ತು ಸಾಮುದಾಯಿಕ ಅರಣ್ಯ ಹಕ್ಕು ಪಡೆದವರ ಪ್ರಮಾಣವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ 42,60,115 ಮಂದಿ ವೈಯಕ್ತಿಕ ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದು, ಅವರಲ್ಲಿ ಕೇವಲ 21,31,771 ಮಂದಿಗೆ ಮಾತ್ರ 45,46,800 ಎಕರೆ ಜಮೀನಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದೆ.

ಸಾಮುದಾಯಿಕ ಅರಣ್ಯ ಹಕ್ಕು ಕಾಯ್ದೆಯಡಿ 1,68,818 ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 1,01,978 ವಿತರಣೆಯಾಗಿದೆ. ಸಾಮುದಾಯಿಕ ಅರಣ್ಯ ಹಕ್ಕಿನಡಿ 1,13,56,527 ಎಕರೆ ಭೂ ಪ್ರದೇಶವನ್ನು ಸಾಮುದಾಯಿಕ ಅರಣ್ಯ ಹಕ್ಕನ್ನು ನೀಡಲಾಗಿದೆ. ಛತ್ತೀಸ್‌ಗಡ್, ಮಹಾರಾಷ್ಟ್ರ, ಒರಿಸ್ಸಾ, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ 11,51,962 ವೈಯಕ್ತಿಕ, 60,961 ಸಾಮುದಾಯಿಕ ಅರಣ್ಯ ಹಕ್ಕುಗಳನ್ನು ಒಳಗೊಂಡಂತೆ ಒಟ್ಟು 12,12,923 ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಫಲಾನುಭವಿಗಳಿಗೆ ಅನುಗುಣವಾಗಿ ಈ ಐದು ರಾಜ್ಯಗಳಲ್ಲಿ 20,41,472.93 ಎಕರೆ ವೈಯಕ್ತಿಕ ಹಕ್ಕಿನಡಿ ಹಾಗೂ 78,60,612.38 ಎಕರೆ ಸಾಮುದಾಯಿಕ ಅರಣ್ಯ ಹಕ್ಕಿನಡಿ ಸೇರಿದಂತೆ ಒಟ್ಟು 99,02,085.30 ಎಕರೆ ಪ್ರದೇಶಗಳಿಗೆ ಹಕ್ಕನ್ನು ನೀಡಲಾಗಿದೆ.

ಕರ್ನಾಟಕ, ಆಂಧ್ರಪ್ರದೇಶ, ಅಸ್ಸಾಂ, ಗುಜರಾತ್, ಜಾರ್ಖಂಡ್, ಕೇರಳ, ಮಧ್ಯಪ್ರದೇಶ, ತ್ರಿಪುರಾ ಮತ್ತು ಉತ್ತರಪ್ರದೇಶ ರಾಜ್ಯಗಳಲ್ಲಿ ಒಟ್ಟು 8,73,872 ವೈಯಕ್ತಿಕ ಅರಣ್ಯ ಹಕ್ಕು ಮತ್ತು 40,235 ಸಾಮುದಾಯಿಕ ಹಕ್ಕು ಸೇರಿದಂತೆ 9,14,107 ಹಕ್ಕುಪತ್ರಗಳನ್ನು ನೀಡಲಾಗಿದೆ, ವೈಯಕ್ತಿಕ ಹಕ್ಕು (21,84,484.69) ಮತ್ತು ಸಾಮುದಾಯಿಕ ಅರಣ್ಯ ಹಕ್ಕು (34,87,525.20 ಎಕರೆ) ಸೇರಿದಂತೆ ಒಟ್ಟು 56,72,009.89 ಎಕರೆ ಭೂ ಪ್ರದೇಶಕ್ಕೆ ಅರಣ್ಯ ಹಕ್ಕನ್ನು ನೀಡಲಾಗಿದೆ.

ನಿರ್ದಿಷ್ಟವಾಗಿ ದುರ್ಬಲ ಬುಡಕಟ್ಟು ಗುಂಪುಗಳು (PVTGs) ಮತ್ತು ಅವರ ಆವಾಸಸ್ಥಾನದ ಹಕ್ಕುಗಳು, ಅರಣ್ಯ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವುದು, ಮಹಿಳೆಯರ ಹಕ್ಕುಗಳು ಇತ್ಯಾದಿಗಳಿಗೆ ಸಂಬಂಧಿಸಿದ ನಿರ್ದಿಷ್ಟ ನಿಬಂಧನೆಗಳನ್ನು ಇನ್ನೂ ತಿಳಿಸಬೇಕಾಗಿದೆ. ತಿರಸ್ಕರಿಸಿದ ಕ್ಲೈಮ್‌ಗಳ ಸಮಸ್ಯೆಯನ್ನು ನಿಭಾಯಿಸಲು ಅಸಮರ್ಪಕ ಪ್ರತಿಕ್ರಿಯೆಯೂ ಇದೆ, ಇದು ವಿವಿಧ ಹಂತಗಳಲ್ಲಿ ಬಾಕಿ ಉಳಿದಿದ್ದು, ಅನಸೂಚಿತ ಬುಡಕಟ್ಟು (ST) ಮತ್ತು ಇತರೆ ಸಾಂಪ್ರದಾಯಿಕ ಅರಣ್ಯವಾಸಿಗಳ (OTFD) ಹಕ್ಕುದಾರರಲ್ಲಿ ಅಸಮಾಧಾನಕ್ಕೆ ಕಾರಣವಾಗುತ್ತದೆ. STಗಳು ಮತ್ತು OTFD ಗಳಲ್ಲಿರುವ ಅರಣ್ಯ ಭೂಮಿಯ ಅಂತಿಮ ಮ್ಯಾಪಿಂಗ್ ಮತ್ತು ಹಕ್ಕುಗಳ ದಾಖಲೆ (RoR) ರಚನೆಯಂತಹ ಹಕ್ಕುಗಳ ಮನ್ನಣೆಯ ನಂತರದ ಎರಡನೇ ತಲೆಮಾರಿನ ಸಮಸ್ಯೆಗಳೂ ಇವೆ. ಅದೇ ರೀತಿ, ಎಸ್‌ಟಿ/ಒಟಿಎಫ್‌ಡಿಗಳ ಅರಣ್ಯ ಹಕ್ಕುದಾರರ ಅನುಕೂಲಕ್ಕಾಗಿ ರಾಜ್ಯದಲ್ಲಿ ಸಣ್ಣ ಅರಣ್ಯ ಉತ್ಪನ್ನಗಳ ಮೇಲೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯನ್ನು ಅನುಷ್ಠಾನಗೊಳಿಸುವುದು ಸವಾಲುಗಳನ್ನು ಎಸೆದಿದೆ. ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಇತ್ತೀಚೆಗೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ, ಇದು ಸಾಮುದಾಯಿಕ ಅರಣ್ಯ ಹಕ್ಕು (CFR) ಹಕ್ಕುಗಳು, ಆವಾಸಸ್ಥಾನದ ಹಕ್ಕುಗಳು, CFR ಗಳ ಆಡಳಿತ ಮತ್ತು ನಿರ್ವಹಣೆ, ಅವರ ಜೀವನೋಪಾಯದ ವರ್ಧನೆಗಾಗಿ ಒಮ್ಮುಖ ಕಾರ್ಯಕ್ರಮಗಳ ಅಡಿಯಲ್ಲಿ ಹಕ್ಕುದಾರರಿಗೆ ಬೆಂಬಲ ಇತ್ಯಾದಿಗಳ ಸಮಸ್ಯೆಗಳನ್ನು ಪರಿಹರಿಸುತ್ತದೆ.

ಒಟ್ಟಾರೆಯಾಗಿ ಕಾಯಿದೆಯ ಅನುಷ್ಠಾನದ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸಲು ಮತ್ತು ಸಮುದಾಯ ಹಕ್ಕುಗಳ ಸಬಲೀಕರಣದ ನಿಬಂಧನೆಗಳ ಪರಿಣಾಮಕಾರಿ ಅನುಷ್ಠಾನವನ್ನು ಸುಗಮಗೊಳಿಸಲು ಮತ್ತು ಖಚಿತಪಡಿಸಿಕೊಳ್ಳಲು ಸಂಬಂಧಿಸಿದ ಸರ್ಕಾರಿ ಅಧಿಕಾರಿಗಳು ಮತ್ತು ಇತರ ಸಂಬಂಧಿತ ಮಧ್ಯಸ್ಥಗಾರರ (ಉದಾಹರಣೆಗೆ ಪಂಚಾಯತ್ ರಾಜ್ (PRI) ಸದಸ್ಯರು) ಪುನಶ್ಚೇತನ ತರಬೇತಿ ಮತ್ತು ದೃಷ್ಟಿಕೋನದ ಅಗತ್ಯವಿದೆ.

**ಕರ್ನಾಟಕದಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ**


ತಲತಲಾಂತರಗಳಿಂದ ಅರಣ್ಯದಲ್ಲಿ ನೆಲೆಸಿರುವ ಅರಣ್ಯ ವಾಸಿಗಳಿಗೆ ಅಲ್ಲೇ ಪುನರ್ವಸತಿ ಹಕ್ಕು ಕಲ್ಪಿಸುವಂತಹ ಮಹತ್ವಾಕಾಂಕ್ಷೆಯ 'ಅನುಸೂಚಿತ ಬುಡಕಟ್ಟುಗಳ ಹಾಗೂ ಇತರ ಪಾರಂಪರಿಕ ಅರಣ್ಯವಾಸಿಗಳ ಅಧಿನಿಯಮ–2006' ಜಾರಿಗೆ ಬಂದು ದಶಕವೇ ಕಳೆದರೂ ಈ ವರ್ಷದ ಸೆಪ್ಟೆಂಬರ್ ಅಂತ್ಯದವರೆಗೆ ಕೇವಲ ಶೇ.4.26ರಷ್ಟು ಅರಣ್ಯವಾಸಿಗಳಿಗೆ ಮಾತ್ರ ಹಕ್ಕುಪತ್ರಗಳನ್ನು ನೀಡಲು ಸಾಧ್ಯವಾಗಿದೆ.

**ಕೋಷ್ಟಕ 2: ಕರ್ನಾಟಕ ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ (31–1–2022 ರಲ್ಲಿದ್ದಂತೆ)**

| ವಿವರ | ಅರಣ್ಯ ಹಕ್ಕು ಪಡೆಯಲು ಸ್ವೀಕಾರಗೊಂಡಿರುವ ಅರ್ಜಿಗಳು | ವಿತರಣೆಯಾಗಿರುವ ಹಕ್ಕುಗಳ ಪ್ರಮಾಣ | ವಿತರಿಸಲಾಗಿರುವ ಭೂಮಿ ಪ್ರಮಾಣ (ಎಕರೆಗಳಲ್ಲಿ) |
|---|---|---|---|
| ವೈಯಕ್ತಿಕ ಅರಣ್ಯ ಹಕ್ಕು | 2,88,313 | 14,650 | 19,986.20 |
| ಸಾಮುದಾಯಿಕ ಅರಣ್ಯ ಹಕ್ಕು | 5,938 | 1,343 | 36,340.40 |
| ಒಟ್ಟು | 2,94,251 | 15,993 | 56,326.60 |

**ಮೂಲ:** ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ನವದೆಹಲಿ–2022

**ಗ್ರಾಫ್ 2: ಕರ್ನಾಟಕ ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ (31–1–2022 ರಲ್ಲಿದ್ದಂತೆ)**




ಅರಣ್ಯ ಹಕ್ಕುಪತ್ರ ಬಯಸಿ ಅನುಸೂಚಿತ ಬುಡಕಟ್ಟು ಹಾಗೂ ಇತರೆ ಪಾರಂಪರಿಕ ಅರಣ್ಯ ವಾಸಿಗಳು ಸಲ್ಲಿಸಿದ ಒಟ್ಟು 2.88.313 ವೈಯಕ್ತಿಕ ಅರಣ್ಯ ಹಕ್ಕಿನಡಿ ಕೇವಲ 14,650 ಹಕ್ಕುಪತ್ರ ವಿತರಿಸಲಾಗಿದೆ. ಇನ್ನುಳಿದಂತೆ 5,938 ಸಾಮುದಾಯಿಕ ಅರಣ್ಯ ಹಕ್ಕಿನಡಿ ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಅರ್ಜಿಗಳಲ್ಲಿ 1343 ಹಕ್ಕುಗಳನ್ನು ನೀಡಲಾಗಿದೆ. ಸಾಮುಯದಾಯಿಕ ಅರಣ್ಯ ಹಕ್ಕು ಮತ್ತು ವೈಯಕ್ತಿಕ ಅರಣ್ಯ ಹಕ್ಕು ಸೇರಿದಂತೆ ಒಟ್ಟು 2,94,251 ಅರ್ಜಿಗಳು ಸಲ್ಲಿಕೆಯಾಗಿದ್ದು, ಇವುಗಳಲ್ಲಿ ಕೇವಲ 15,993 (5.44%) ಅರ್ಜಿಗಳು ಮಾತ್ರ ಮಾನ್ಯ ಮಾಡಲಾಗಿದೆ. ಇತರೆ ರಾಜ್ಯಗಳಿಗೆ ಆಂದ್ರಪ್ರದೇಶ (76.7%) ಮತ್ತು ಒರಿಸ್ಸಾ

(ಶೇ.71.41), ಕೇರಳ (60.41), ತ್ರಿಪುರಾ (63.68%) ಹೋಲಿಸಿದರೆ ಕರ್ನಾಟಕದ ಸಾಧನೆ (5.44) ಅತ್ಯಂತ ಕಳಪೆ ಎಂದು ಹೇಳಬಹುದಾಗಿದೆ.

2005ರ ಡಿ.13 ಕ್ಕಿಂತ ಮುಂಚೆ ಜೀವನೋಪಾಯದ ಅವಶ್ಯಕತೆಗಳಿಗಾಗಿ ಅರಣ್ಯ ಅಥವಾ ಅರಣ್ಯ ಜಮೀನಿನ ಮೇಲೆ ಅವಲಂಬಿತರಾಗಿರುವ ಪರಿಶಿಷ್ಟ ವರ್ಗದವರು ಹಾಗೂ ಕೊನೆ ಪಕ್ಷ ಮೂರು ತಲೆಮಾರಿನವರಿಗೆ (ಒಂದು ತಲೆಮಾರಿಗೆ 25 ವರ್ಷ) ಪ್ರಧಾನವಾಗಿ ಅರಣ್ಯದಲ್ಲಿ ನೆಲೆಸಿರುವ ಇತರೆ ಪಾರಂಪರಿಕ ಅರಣ್ಯ ವಾಸಿಗಳು ವೈಯಕ್ತಿಕ ಹಾಗೂ ಸಮುದಾಯ ನಿಯಮದಡಿ ಹಕ್ಕು ಸ್ವಾಮ್ಯಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ. 2007 ಫೆ. 28 ರೊಳಗೆ ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಿ, ಶೀಘ್ರ ಅಧಿನಿಯಮ ಅನುಷ್ಠಾನಕ್ಕೆ ತರುವಂತೆ ಅಂದಿನ ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸ್ಪಷ್ಟ ನಿರ್ದೇಶನ ನೀಡಿತ್ತು. ಆದರೆ, ಇದುವರೆಗೂ ನಿರೀಕ್ಷಿತ ಪ್ರಮಾಣದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಒದಗಿಸಲು ಸರ್ಕಾರದಿಂದ ಸಾಧ್ಯವಾಗಿಲ್ಲ ಎಂಬುದು ಅಂಕಿ–ಅಂಶಗಳಿಂದ ದೃಢಪಟ್ಟಿದೆ.

ಉತ್ತರ ಕನ್ನಡ ಜಿಲ್ಲೆಯಿಂದ ಅರಣ್ಯ ಹಕ್ಕುಪತ್ರ ಬಯಸಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ. ಜಿಲ್ಲೆಯಲ್ಲಿ ಸಲ್ಲಿಕೆಯಾದ ಒಟ್ಟು 1,17,881 ಅರ್ಜಿಗಳ ಪೈಕಿ, ಕೇವಲ 2,225 ಅರ್ಜಿದಾರರಿಗೆ ಮಾತ್ರ (ಶೇ.3.77) ಹಕ್ಕುಪತ್ರ ನೀಡಲಾಗಿದೆ. 59,253 ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, 56,403 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ. ಶಿವಮೊಗ್ಗ ಜಿಲ್ಲೆಯಿಂದ ಸಲ್ಲಿಕೆಯಾದ 85,518 ಅರ್ಜಿಗಳ ಪೈಕಿ, 30805 ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, 52,141 ಅರ್ಜಿಗಳು ವಿಲೇವಾರಿಗೆ ಬಾಕಿ ಉಳಿದಿವೆ. ಕೇವಲ 2572 ಜನರಿಗೆ ಮಾತ್ರ ಹಕ್ಕುಪತ್ರ ನೀಡಲಾಗಿದೆ. ಚಿಕ್ಕಮಗಳೂರಿನಲ್ಲಿ 24,670, ಮೈಸೂರಿನಲ್ಲಿ 7,026, ಚಾಮರಾಜನಗರದಲ್ಲಿ 2,512, ಕೊಡಗಿನಲ್ಲಿ 3,613, ದಕ್ಷಿಣ ಕನ್ನಡದಲ್ಲಿ 2,382, ಉಡುಪಿಯಲ್ಲಿ 2,118, ರಾಮನಗರದಲ್ಲಿ 4,582 ಅರ್ಜಿಗಳು ಸಲ್ಲಿಕೆಯಾಗಿವೆ. ಗದಗ ಜಿಲ್ಲೆಯಲ್ಲಿ 796, ದಾವಣಗೆರೆಯಿಂದ 10,080 ಬೆಳಗಾವಿಯಿಂದ 17,424, ಚಿತ್ರದುರ್ಗದಿಂದ 4,693, ಹಾಸನದಿಂದ 492 ಅರ್ಜಿಗಳು ಸಲ್ಲಿಕೆಯಾಗಿದೆ. ವಿಜಯಪುರ, ರಾಯಚೂರು, ಚಿಕ್ಕಬಳ್ಳಾಪುರ, ಬೀದರ್, ಕೋಲಾರ ಹಾಗೂ ಯಾದಗಿರಿ ಜಿಲ್ಲೆಗಳಿಂದ ಕಡಿಮೆ ಪ್ರಮಾಣದಲ್ಲಿ ಅರ್ಜಿ ಸಲ್ಲಿಕೆಯಾಗಿದೆ. ಅರಣ್ಯದಲ್ಲಿ ನೆಲೆಸಿರುವ ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಕಲ್ಪಿಸಲು ಸ್ಥಳೀಯ ಮಟ್ಟದಲ್ಲಿ ಒಟ್ಟು 12,728 ಅರಣ್ಯಹಕ್ಕು ಸಮಿತಿಗಳನ್ನು ರಚಿಸಲಾಗಿದೆ.

ಈ ಕಾಯ್ದೆಯಿಂದಾಗಿ ಮೂಲವಾಸಿಗಳು ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪಡೆದುಕೊಳ್ಳುವ ಮತ್ತು ಅವರು ಅದರ ಒಡೆಯರು ಆಗುವ ಹಕ್ಕನ್ನು ಸರ್ಕಾರ ಮೂಲವಾಸಿಗಳಿಗೆ ನೀಡಿದೆ, ಮೂಲವಾಸಿಗಳು ಯಾರ ಹಂಗು ಇಲ್ಲದೆ ಬದುಕುತ್ತಿದ್ದಾರೆ ಮತ್ತು ಸಂಪ್ರದಾಯಿಕ ಹಕ್ಕುಗಳನ್ನು ನೀಡಿ ಮೂಲವಾಸಿಗಳಿಗೆ ಸರ್ಕಾರ ಮತ್ತು ಜಿಲ್ಲಾ ಆಡಳಿತ ಬಹಳ ಉತ್ತಮವಾದ ಕೆಲಸ ಮಾಡಿರುತ್ತಾರೆ ಇದರಿಂದ ಮೂಲವಾಸಿಗಳು ಸ್ವಾವಲಂಬಿಗಳಾಗಿ ಜೀವನ ನಡೆಸಲು ಸಹಾಯವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು:**


- ಅರಣ್ಯ ಇಲಾಖೆ ಕೈಪಿಡಿ. (2013). ಚೈತನ್ಯ ಪ್ರಕಾಶನ. ಶಿವಾನಂದನಗರ ಮುಖ್ಯರಸ್ತೆ, ಧಾರವಾಡ.
- ಪಾರ್ವತಮ್ಮ. ಸಿ. (2005). ಆದಿವಾಸಿ ಸಮುದಾಯಗಳ ಬದುಕು ಬವಣೆ, ಸಿಆರ್‌ಆರ್‌ಟಿಡಿ, ಮೈಸೂರು.
- ಉದಯವಾಣಿ (2020, ಮಾರ್ಚ್ 17) ರಂದು ಪತ್ರಿಕೆಯಲ್ಲಿ ಪ್ರಕಟವಾದ ಅರಣ್ಯ ಹಕ್ಕು ಕಾಯಿದೆಯಡಿ ಭೂಮಿ ಮಂಜೂರಾತಿ: ನಿರಂತರ ಸಭೆಗೆ ಸೂಚನೆ. ಬೆಂಗಳೂರು.
- ನಾಗರಾಜ ಕೆ.ವಿ. (20014, ಜುಲೈ 2). ಅರಣ್ಯ ಹಕ್ಕು ಕಾಯ್ದೆ: ರೈತರಿಗೆ ತೊಂದರೆ. https://www.prajavani.net/article
- ನಾನೂ ಗೌರಿ.ಕಾಮ್. (2021, ಆಗಸ್ಟ್ 1). ಉತ್ತರ ಕನ್ನಡ ಆಳುವವರ ಅಸಡ್ಡೆ; ಬೀದಿಗೆ ಬೀಳುವ ಭಯದಲ್ಲಿ ಅರಣ್ಯ ಸಾಗುವಳಿದಾರರು.
- ಪ್ರಜಾವಾಣಿ. (2020, ಅಕ್ಟೋಬರ್ 7). ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನಕ್ಕೆ ಒತ್ತಾಯ. Prajavani. https://www.prajavani.net/district/mysore/insist-on-implementation-of-forest-rights-act-768727.html
- Amisha Jain and Rama Sharma. (2015), The Indian Forest Rights Act, 2006: Salient Features, Scope and 2012 Amendment Rules, International Journal of Social Science and Humanities, Vol. 4, No. 2, pp. 095-108.
- Chaithanaya, E.P. (2012). Historical injustice toward tribals: A reflection on forest policies of India. International Journal of Social Science & Interdisciplinary Research, 1(11).
- Dash, T. (2010). *Forest Rights Act Strengthening Community Conservation in Badrama Wildlife Sanctuary in Sambalpur District of Orissa*, Vasundhara discussion paper. Last accessed September 17, 2010, at: http://www.ncasindia.org/fra/documents/badrama_07_10.pdf.
- SCSTRTI, (2009). Implementation of ST and Other Traditional Forest Dwellers (Recognition of Forest Rights) Act, 2006, in Adivasi, Journal of SCSTRTI, Bhubaneswar, Odisha.